1. <u>**ಮಾಹಿತಿ ಕೇಂದ್ರ:–**</u> **ದೇವಾಲಯಕ್ಕೆ ಹೆಚ್ಚಿನ ಆದಾಯವನ್ನು ತರುವ ಸಲುವಾಗಿ ಹಾಗೂ ದೇವಾಲಯಕ್ಕೆ ಬರುವ ಭಕ್ತರಿಗೆ ಸಲಹೆ ಹಾಗೂ ಮಾಹಿತಿಗಳನ್ನು ನೀಡುವ ಸಲುವಾಗಿ ದೇವಾಲಯದ ಒಳಭಾಗದಲ್ಲಿ ಅಲ್ಯೂಮಿನಿಯಂ ಪಾರ್ಟೀಷಿಯನ್ ಮೂಲಕ ಮಾಹಿತಿಕೇಂದ್ರ ನಿರ್ಮಿಸಿದ್ದು ಸದರಿ ಕೇಂದ್ರವು ಸದ್ಯ ಪ್ರತಿ ತಿಂಗಳು ರೂ. 150000–200000 ಗಳವರೆಗೆ ಆದಾಯವನ್ನು ದೇವಾಲಕ್ಕೆ ಹೆಚ್ಚಿನದಾಗಿ ತರಲು ನೆರವಾಗಿದೆ.**









2. **ರಂಗೋಲಿ ಸ್ಪರ್ಧೆ :–** ಎಡೆಯೂರು ಹಾಗೂ ಸುತ್ತಮುತ್ತಲ ಗ್ರಾಮಸ್ಥರಲ್ಲಿ ಮತ್ತು ದೇವಾಲಯದ ನಡುವೆ ಸಮನ್ವಯ ಮೂಡಿಸುವ ಸಲುವಾಗಿ ಹಾಗೂ ಗ್ರಾಮಿಣ ಪ್ರತಿಭೆಯ ಅನ್ವೇಷಣೆಗಾಗಿ ಪ್ರಥಮವಾಗಿ ದೇವಾಲಯದ ವತಿಯಿಂದ 18–10–2018ನೇ ಶುಕ್ರವಾರ ಹೋಬಳಿ ಮಟ್ಟದ ರಂಗೋಲಿ ಸ್ಪರ್ಧೆ ಆಯೋಜನೆ ಮಾಡಲಾಗಿತ್ತು ಸದರಿ ಕಾರ್ಯಕ್ರಮಕ್ಕೆ ಸುಮಾರು 126 ಜನ ಗ್ರಾಮೀಣ ಪ್ರತಿಭೆಗಳು ಪಾಲ್ಗೊಂಡಿದ್ದು ವಿಶೇಷ.














3. **ಸ್ವಚ್ಛಭಾರತ ಅಭಿಯಾನ :–** ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಸೂಚನೆಯಂತೆ ಗಾಂಧಿ ಜಯಂತಿಯ ಪ್ರಯುಕ್ತ ದಿನಾಂಕ 02–10–2018 ರಿಂದ ಒಟ್ಟು 4 ದಿನಗಳ ಕಾಲ ವಿವಿಧ ಶಾಲಾ–ಕಾಲೇಜು, ಪಾಠಶಾಲೆ ಹಾಗೂ ಎಡೆಯೂರು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರ ಸಹಯೋಗದಿಂದ ದೇವಾಲಯದ ವತಿಯಿಂದ ಪ್ರಥಮಭಾರಿಗೆ ಒಟ್ಟು 1500 ಜನ ರಿಂದ ಗ್ರಾಮದ ಸ್ವಚ್ಛತೆಗಾಗಿ ಶ್ರಮದಾನ ನಡೆಸಲಾಯಿತು.













4. **ಪೆಟ್ರೋಲ್ ಬಂಕಿನ ಬಗ್ಗೆ ಶಿಸ್ತು ಕ್ರಮ:-** ಸುಮಾರು ವರ್ಷಗಳಿಂದ ದೇವಾಲಯದ ಆಡಳಿತಕ್ಕೆ ಒಳಪಟ್ಟ ಪೆಟ್ರೋಲ್‌ಬಂಕಿನಲ್ಲಿನ ಅವ್ಯವಸ್ಥೆಗಳನ್ನು ನಿವಾರಿಸಿ ಹಿಂದಿನ ಆದಾಯಕ್ಕಿಂತಲು ಮಾಸಿಕವಾಗಿ ರೂ. 150000-200000 ಗಳವರೆಗೆ ಹೆಚ್ಚಿನ ಆದಾಯ ಬರುವಂತೆ ಕ್ರಮವಹಿಸಲಾಗಿದೆ.












5. **ಪಾದರಕ್ಷೆ ಮಳಿಗೆ :– ದೇವಾಲಯದ ಮುಂಭಾಗ ಭಕ್ತರು ಪಾದರಕ್ಷೆ ಬಿಡಲು ಅವಶ್ಯಕವಾದ ಸೂಕ್ತ ಸುಸಜ್ಜಿತ ಪಾದರಕ್ಷೆ ಮಳಿಗೆಯನ್ನು ದೇವಾಲಯದಲ್ಲಿ ಹಾಲಿ ಇದ್ದ ಹಳೆಯ ಪೈಪ್‌ಗಳು ಹಾಗೂ ಶೀಟ್‌ಗಳನ್ನು ಉಪಯೋಗಿಸಿಕೊಂಡು ನೂತನವಾಗಿ ನಿರ್ಮಿಸಲಾಯಿತು.**







6. ಸೇವಾ ವಿಭಾಗ :- ದೇವಾಲಯಕ್ಕೆ ಬರುವ ಭಕ್ತರು ಕಾಣಿಕೆ ಸಲ್ಲಿಸಲು ಹಾಗೂ ಸೇವಾ ರಸೀದಿ ಪಡೆಯುವ ಸ್ಥಳವನ್ನು ಬಣ್ಣ ಬಳಿಸಿ ಸೂಕ್ತ ಸೂಚನಾ ಫಲಕದ ಬೋರ್ಡನ್ನು ಹಾಕಲಾಯಿತು.










7. ಸೆಕ್ಯೂರಿಟಿ ಕ್ಯಾಬಿನ್ :- ದೇವಾಲಯಕ್ಕೆ ಬರುವ ಭಕ್ತರು ತಮ್ಮ ವಾಹನಗಳನ್ನು ನಿಗದಿತ ದೇವಾಲಯದ ಪಾರ್ಕಿಂಗ್ ಸ್ಥಳಕ್ಕೆ ನಿಲ್ಲಿಸಲು ಸೂಚನೆ ನೀಡಲು ಹಾಗೂ ದೇವಾಲಯದ ಭದ್ರತೆ ದೃಷ್ಠಿಯಿಂದ ಅತ್ಯವಶ್ಯಕವಾದ ಸೆಕ್ಯೂರಿಟಿ ಕ್ಯಾಬಿನ್ನನು ದೇವಾಲಯದ ಕಾಂಕ್ರೀಟ್ ರಸ್ತೆ ಪ್ರಾರಂಭದಲ್ಲಿ ನಿರ್ಮಿಸಲಾಯಿತು.





8. **ಲಾಡು–ಮಿಠಾಯಿ ಮಾರಾಟ ಮಳಿಗೆ :– ದೇವಾಲಯಕ್ಕೆ ಬರುವ ಭಕ್ತರಿಗೆ ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯದ ವತಿಯಿಂದ ತಯಾರಿಸುವ ಮಹಾ ಪ್ರಸಾದವಾದ ಲಾಡು–ಮಿಠಾಯಿಗಳನ್ನು ಮಾರಾಟ ಮಾಡಲು ಅವಶ್ಯಕವಾದ ಮಾರಾಟ ಮಳಿಗೆಯನ್ನು ದೇವಾಲಯದ ಒಳಭಾಗದಲ್ಲಿನ ಪೌಳಿಯಲ್ಲಿ ನಿರ್ಮಿಸಲಾಗಿದೆ.**












9. ತೆಂಗಿನ ಕಾಯಿ ಹೊಡೆಯುವ ಸ್ಥಳ :– ದೇವಾಲಯದ ಒಳಭಾಗದಲ್ಲಿ ಈ ಹಿಂದೆ ಇದ್ದ ಹಳೆಯ ತೆಂಗಿನ ಕಾಯಿ ಸ್ಥಳವು ತೆಂಗಿನ ಗರಿಗಳ ಚಪ್ಪರದಿಂದ ಇದ್ದಿದ್ದನ್ನು ಗಮನಿಸಿ ಅದನ್ನು ತೆರವುಗೊಳಿಸಿ ಅದೇ ಜಾಗದಲ್ಲಿ ದೇವಾಲಯದಲ್ಲಿ ಹಾಲಿ ಇದ್ದ ಹಳೆಯ ಪೈಪ್‌ಗಳು ಹಾಗೂ ಶೀಟ್‌ಗಳನ್ನು ಉಪಯೋಗಿಸಿಕೊಂಡು ನೂತನವಾಗಿ ತೆಂಗಿನ ಕಾಯಿ ಹೊಡೆಯುವ ಸ್ಥಳವನ್ನು ನಿರ್ಮಿಸಲಾಯಿತು.









10. ಲ್ಯಾಪ್‌ಟ್ಯಾಪ್ ಹಾಗೂ ಪುಸ್ತಕಗಳ ವಿತರಣೆ:– ದೇವಾಲಯದ ಆಡಳಿತಕ್ಕೆ ಒಳಪಟ್ಟ ಶಾಲಾ–ಕಾಲೇಜಿನ ಮಕ್ಕಳ ಉತ್ಕೃಷ್ಟ ವಿದ್ಯಾಭ್ಯಾಸಕ್ಕಾಗಿ ಅವಶ್ಯಕವಾಗಿರುವ 4 ಲ್ಯಾಪ್‌ಟ್ಯಾಪ್‌ಗಳು ಹಾಗೂ 1500 ಸಂಖ್ಯೆಯ ವಿವಿಧ ಪಠ್ಯೇತರ ಪುಸ್ತಕಗಳನ್ನು ದಾನಿಗಳ ಮೂಲಕ ಪಡೆಯಲಾಯಿತು.







11. ವಿಶೇಷ ಮಾಸದ ಸೋಮವಾರ ದಿವಸ ಪ್ರಸಾದ ವಿತರಣೆ :- ಕಾರ್ತೀಕ ಮತ್ತು ಶ್ರಾವಣ ಮಾಸದ ಪ್ರಯುಕ್ತ ದೇವಾಲಯಕ್ಕೆ ಸಹಸ್ತ್ರಾರು ಸಂಖ್ಯೆಯಲ್ಲಿ ಬರುವ ಭಕ್ತರಿಗೆ ದೇವಾಲಯದಲ್ಲಿ ಜೊನ್ನೆ ಮೂಲಕ ಪ್ರಸಾದ ವಿತರಿಸಲು ಪ್ರತಿ ಸೋಮವಾರ ಭಕ್ತರನ್ನು ಮನವೊಲಿಸಿ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.







12. ಹುಬ್ಬಳ್ಳಿ ಹುಂಡಿ ಪರ್ಕಾವಣೆ ಹಾಗೂ ನವೀಕರಣಕ್ಕೆ ಸೂಕ್ತ ಕ್ರಮ :- ಸುಮಾರು 3 ವರ್ಷಗಳಿಂದ ಬಾಕಿ ಇದ್ದ ಹುಬ್ಬಳ್ಳಿಯಲ್ಲಿನ ಶಾಖಾ ದೇವಾಲಯದಲ್ಲಿನ ಹುಂಡಿಗಳನ್ನು ಪರ್ಕಾವಣೆ ಮಾಡಿ ಸುಮಾರು ರೂ. 280000 ಗಳನ್ನು ಎಣಿಕೆ ಮಾಡಲಾಯಿತು ಹಾಗೂ ಹುಬ್ಬಳ್ಳಿ ಶಾಖಾ ದೇವಾಲಯದಲ್ಲಿನ ಕಟ್ಟಡ ನವೀಕರಣಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ದೇವಾಲಯದ ವ್ಯವಸ್ಥಾಪನಾ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು.













13. ಕಗ್ಗೆರೆ ಮಹಾಧ್ವಾರ ನಿರ್ಮಾಣ :- ಎಡೆಯೂರು ದೇವಾಲಯದ ಆಡಳಿತಕ್ಕೆ ಒಳಪಟ್ಟ ತಪೋಕ್ಷೇತ್ರ ಕಗ್ಗೆರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರನ್ನು ಸೆಳೆಯುವ ಉದ್ದೇಶಕ್ಕಾಗಿ ಭಕ್ತರ ಮೂಲಕ ಸುಮಾರು ರೂ. 30 ಲಕ್ಷಗಳ ವೆಚ್ಚದಲ್ಲಿ ಕಗ್ಗೆರೆಯ ಮಹಾದ್ವಾರವನ್ನು ರಾಷ್ಟ್ರೀಯ ಹೆದ್ದಾರಿ 75ರಲ್ಲಿ ನಿರ್ಮಿಸಲಾಯಿತು.









14. **ದೇವಾಲಯದ ಕ್ಷಿಪ್ರ ನವೀಕರಣಕ್ಕೆ ಒತ್ತು :–** ಎಡೆಯೂರು ದೇವಾಲಯದಲ್ಲಿ ಹಿಂದೆ ನೆನೆಗುದಿಗೆ ಬಿದ್ದಿದ್ದ ನವೀಕರಣ ಕೆಲಸಗಳನ್ನು ಅತ್ಯಂತ ತುರ್ತಾಗಿ ಹಾಗೂ ಅಚ್ಚುಕಟ್ಟಾಗಿ ಮುಗಿಸಲು ದೇವಾಲಯದ ವ್ಯವಸ್ಥಾಪನಾ ಸಮಿತಿ ಹಾಗೂ ಪಿ.ಡಬ್ಲ್ಯೂ.ಡಿ. ಇಲಾಖೆ ವತಿಯವರ ಬಳಿ ಚರ್ಚಿಸಿ ದೇವಾಲಯದ ಒಳಭಾಗದಲ್ಲಿ ಶ್ರೀಸ್ವಾಮಿಯ ಪವಾಡಗಳನ್ನು ನಿರ್ಮಿಸಲು ಹಾಗೂ ಪ್ಲೂರ್ ಗ್ರಾನೈಟ್‌ಗಳನ್ನು ಹಾಕಲು ಕ್ರಮ ಕೈಗೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಲಾಯಿತು.






























15. **ದರ್ಶನದ ಸರತಿ ಸಾಲು ನಿರ್ಮಾಣ :–** ಇತ್ತಿಚಿನ ದಿನಗಳಲ್ಲಿ ದೇವಾಲಯಕ್ಕೆ ಭೇಟಿಕೊಡುವ ಭಕ್ತರ ಸಂಖ್ಯೆ ಹೆಚ್ಚಾಗಿದ್ದು ಅವರುಗಳು ಸ್ವಾಮಿಯ ದರ್ಶನ ಪಡೆಯಲು ಬಿಸಿಲಿನಲ್ಲಿ ನಿಲ್ಲುತ್ತಿದ್ದನ್ನು ಗಮನಿಸಿ ಅವರಿಗೆ ಸೂಕ್ತ ನೆರಳಿನ ವ್ಯವಸ್ಥೆ ಕಲ್ಪಿಸುವ ಸಲುವಾಗಿ ಸುಮಾರು ರೂ. 25 ಲಕ್ಷಗಳ ವೆಚ್ಚದಲ್ಲಿ ಸುಸಜ್ಜಿತ ದರ್ಶನದ ಸರತಿ ಸಾಲನ್ನು ನಿರ್ಮಿಸಲಾಯಿತು.

















16. ಬಾಳೆಹೊನ್ನೂರು ಮಠಕ್ಕೆ ನೀರು ಸರಬರಾಜು :– ದೇವಾಲಯದ ಪಕ್ಕದಲ್ಲಿನ ಬಾಳೆಹೊನ್ನೂರು ಮಠವು ಅತ್ಯಂತ ಪುರಾತನ ಮಠವಾಗಿದ್ದು ದೇವಾಲಯಕ್ಕೆ ಭೇಟಿ ಕೊಡುವ ಭಕ್ತರು ಮಠಕ್ಕೆ ಭೇಟಿ ಕೊಟ್ಟಾಗ ಅವರಿಗೆ ಸೂಕ್ತ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದನ್ನು ಗಮನಿಸಿ ಮಠದ ಸ್ವಾಮೀಜಿಯವರ ಮನವಿ ಮೆರೆಗೆ ಮಠಕ್ಕೆ ದೇವಾಲಯದ ವತಿಯಿಂದ ಕುಡಿಯುವ ಸಿಹಿ ನೀರಿನ ಶಾಶ್ವತ ಸರಬರಾಜಿಗೆ ಕ್ರಮಕೈಗೊಳ್ಳಲಾಯಿತು ಹಾಗೂ ಇದರಿಂದ ದೇವಾಲಯ ಹಾಗೂ ಬಾಳೆಹೊನ್ನೂರು ಮಠದ ನಡುವೆ ಸಮನ್ವಯತೆ ಕಾಪಾಡಲು ಸಹಕಾರಿಯಾಯಿತು.













17. ವಾಹನಗಳ ಪಾರ್ಕಿಂಗ್ ಟ್ರಾಕ್ :– ದೇವಾಲಯಕ್ಕೆ ಬರುವ ಭಕ್ತರ ವಾಹನಗಳನ್ನು ನಿಲ್ಲಿಸಲು ಸೂಕ್ತ ಪಾರ್ಕಿಂಗ್ ಜಾಗವಿಲ್ಲದಿರುವುದನ್ನು ಗಮನಿಸಿ ವಾಹನಗಳ ಶಿಸ್ತಿನ ಪಾರ್ಕಿಗ್ ಹಾಗೂ ಅವುಗಳ ಭದ್ರತೆ ದೃಷ್ಟಿಯಿಂದ ದೇವಾಲಯದ ಮುಂಭಾಗದಲ್ಲಿನ ಕಾಂಕ್ರೀಟ್ ರಸ್ತೆಯ ಮೇಲೆ ಭಕ್ತರ ನೆರವಿನಿಂದ ಸುಮಾರು 1/2 ಎಕರೆ ಸ್ಥಳಕ್ಕೆ ಉಚಿತವಾಗಿ ಪಾರ್ಕಿಂಗ್ ಟ್ರಾಕ್‌ಗಳನ್ನು ಬರೆಸಲಾಯಿತು.










18. ಬಿಳಿ ಬಣ್ಣದ ಪಟ್ಟಿ :– ಸ್ವಾಮಿಯ ದರ್ಶನಕ್ಕೆ ಬರುವ ಭಕ್ತರು ಬಿಸಿಲಿನಲ್ಲಿ ಬರುವುದನ್ನು ಗಮನಿಸಿ ಅವರ ಪಾದಗಳು ಸುಡಬಾರದೆಂದು ದೇವಾಲಯದ ಮುಂಭಾಗದಲ್ಲಿನ ಕಾಂಕ್ರೀಟ್ ರಸ್ತೆಯ ಮೇಲೆ ಭಕ್ತರ ನೆರವಿನಿಂದ ಉಚಿತವಾಗಿ ಸರತಿ ಸಾಲಿನ ದರ್ಶನದ ಬಿಳಿ ಪಟ್ಟಿಯನ್ನು ಹಾಕಿಸಲಾಯಿತು.











19. ಸಮಾಜಮುಖಿ ಕೆಲಸಗಾರರಿಗೆ ಸನ್ಮಾನ :- ಎಡೆಯೂರು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸಮಾಜಮುಖಿ ಕೆಲಸಗಳನ್ನು ಮಾಡುವವರನ್ನು ಗುರುತಿಸಿ ಅವರಿಗೆ ಇನ್ನು ಹೆಚ್ಚಿನ ಉತ್ತೇಜನ ನೀಡುವ ಸಲುವಾಗಿ ದೇವಾಲಯದ ವತಿಯಿಂದ ಅವರಿಗೆ ಸನ್ಮಾನ ಮಾಡುವ ಕೆಲಸ ಪ್ರಾರಂಭಿಸಲಯಿತು.








20. ವಚನ ಬೋರ್ಡ್‌ಗಳ ಅಳವಡಿಕೆ :– ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯವರು ರಚಿಸಿದ ವಚನಗಳನ್ನು ದೇವಾಲಯಕ್ಕೆ ಬರುವ ಭಕ್ತರಿಗೆ ತಿಳಿಪಡಿಸುವ ಹಾಗೂ ತಲುಪಿಸುವ ಉದ್ದೇಶದಿಂದ ಎಡೆಯೂರಿನ ಗ್ರಾಮಸ್ಥರ ನೆರವಿನಿಂದ ಸುಮಾರು 20 ವಚನದ ಲೈಟಿಂಗ್ ಬೋರ್ಡ್‌ಗಳನ್ನು ದೇವಾಲಯದ ರಸ್ತೆಯ ಲೈಟ್‌ಕಂಬಗಳಿಗೆ ಅಳವಡಿಸಲಾಯಿತು.











21. ಶೈಕ್ಷಣಿಕ ಪ್ರಗತಿ ಬಗ್ಗೆ ಕ್ರಮ :- ದೇವಾಲಯದ ಆಡಳಿತಕ್ಕೆ ಒಳಪಟ್ಟ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ನೀಡಲು ಅಗತ್ಯ ಕ್ರಮ ಕೈಗೊಳ್ಳುವ ಸಲುವಾಗಿ ಆಗ್ಗಿಂದಾಗೆ ಶಾಲಾ ಕಾಲೇಜು ಶಿಕ್ಷಕರ ಹಾಗೂ ಉಪನ್ಯಾಸಕರ ಸಭೆಗಳನ್ನು ಕೈಗೊಂಡು ಮಕ್ಕಳ ಉತ್ತಮ ವಿದ್ಯಾಭ್ಯಸಕ್ಕಾಗಿ ಅವಶ್ಯಕವಾಗಿ ಬೇಕಾಗಿದ್ದ ಒಬ್ಬರು ಕಂಪ್ಯೂಟರ್ ಕಲಿಸುವ ಟೀಚರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಯಿತು.










22. ಕಗ್ಗೆರೆ ದೇವಾಲಯದ ಜಾಹಿರಾತು ನಿರ್ಮಾಣ :- ಎಡೆಯೂರು ದೇವಾಲಯದ ಆಡಳಿತಕ್ಕೆ ಒಳಪಟ್ಟ ತಪೋಕ್ಷೇತ್ರ ಕಗ್ಗೆರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರನ್ನು ಸೆಳೆಯುವ ಉದ್ದೇಶಕ್ಕಾಗಿ ಎಡೆಯೂರು ದೇವಾಲಯದ ಮುಂಭಾಗ ಕಗ್ಗೆರೆ ತಪೋಕ್ಷೇತ್ರದ ಮಹತ್ವವನ್ನು ಸಾರುವ ಹಾಗೂ ಕ್ಷೇತ್ರದಿಂದ ಹತ್ತಿರದಲ್ಲಿ ವೀಕ್ಷಿಸಬಹುದಾದದ ಸ್ಥಳಗಳ ಮಾಹಿತಿಗಳನ್ನೊಳಗೊಂಡ ದೊಡ್ಡದೋಮದು ಶಾಶ್ವತ ಜಾಹಿರಾತು ಬೋರ್ಡ್‌ನ್ನು ನಿರ್ಮಿಸಲಾಯಿತು ಹಾಗೂ ಇದರಿಂದ ಕಗ್ಗೆರೆ ಕ್ಷೇತ್ರಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗಲು ಕಾರಣವಾಯಿತು.














23. ವಿಶೇಷ ದರ್ಶನದ ಟಿಕೇಟ್ ಕೌಂಟರ್ :- ಇತ್ತಿಚಿನ ದಿನಗಳಲ್ಲಿ ದೇವಾಲಯಕ್ಕೆ ಭೇಟಿಕೊಡುವ ಭಕ್ತರ ಸಂಖ್ಯೆ ಹೆಚ್ಚಾಗಿದ್ದು ಕ್ಷೇತ್ರಕ್ಕೆ ಬರುವ ಭಕ್ತರಿಗೆ ಸ್ವಾಮಿಯವರ ವಿಶೇಶ ದರ್ಶನ ಪಡೆಯಲು ಟಿಕೇಟ್‌ಗಳನ್ನು ನೀಡಲು ಅತ್ಯವಶ್ಯಕವಾಗಿಬೇಕಾಗಿದ್ದ ಕೌಂಟರನ್ನು ದೇವಾಲಯದ ಮುಂಭಾಗ ನಿರ್ಮಿಸಲಾಯಿತು ಹಾಗೂ ಇದರೀಮದ ಇನ್ನು ಹೆಚ್ಚಿನ ಆದಾಯ ದೇವಾಲಯಕ್ಕೆ ಬರುವಂತೆ ಮಾಡಲಾಯಿತು.






24. ಉಚಿತ ಆರೋಗ್ಯ ತಪಾಸಣ ಶಿಬಿರ :– ಕ್ಷೇತ್ರದ ಸಿಬ್ಬಂದಿಗಳ, ಎಡೆಯೂರು ಹಾಗೂ ಸುತ್ತಲಿನ ಗ್ರಾಮಸ್ಥರ ಆರೋಗ್ಯ ಸುಧಾರಣೆಯ ಉದ್ದೇಶದಿಂದ ಭಕ್ತರ ನೆರವಿನಿಂದ ಕ್ಷೇತ್ರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಕೈಗೊಳ್ಳಲಾಗಿತ್ತು ಹಾಗೂ ಶಿಬಿರದಲ್ಲಿ ಬಂದಿದ್ದ ಸುಮಾರು 240 ಜನರಿಗೆ ಉಚಿತ ಕಣ್ಣಿನ ಕನ್ನಡಕಗಳನ್ನು ವಿತರಿಸಲಾಯಿತು.











25. ಕಸದ ವಿಲೇವಾರಿ ಬಗ್ಗೆ ಕ್ರಮ :- ದೇವಾಲಯದ ಆವರಣದಲ್ಲಿ ಸ್ವಚ್ಛತೆಯನ್ನು ಕಾಪಾಡುವ ಸಲುವಾಗಿ ಭಕ್ತರ ನೆರವಿನಿಂದ ಹಾಗೂ ದೇವಾಲಯದ ವತಿಯಿಂ ಎದೆಡೆಯೂರು ದೇವಾಲಯದ ಹಾಗೂ ತಪೋಕ್ಷೇತ್ರ ಕಗ್ಗೆರೆಯ ವಿವಿಧ ಸ್ಥಳಗಳಲ್ಲಿ ಸುಮಾರು 10 ಕಡೆಗಳಲ್ಲಿ ಕಸವನ್ನು ಸಂಗ್ರಹಿಸಲು ಸಿಮೆಂಟ್ ರಿಂಗ್‌ಗಳನ್ನು ಹಾಗೂ ಎಡೆಯೂರು ಗ್ರಾಮ ಪಂಚಾಯ್ತಿಯವರ ನೆರವು ಪಡೆದು ಅವರಿಂದ ಒಟ್ಟು 10 ದೊಡ್ಡ ಕಸದ ಬುಟ್ಟಿಗಳನ್ನು ಅಳವಡಿಸಲಾಯಿತು.






26. ಅಕ್ರಮ ಒತ್ತುವರಿಯ ಬಗ್ಗೆ ಕ್ರಮ :– ದೇವಾಲಯದ ಮುಂಭಾಗದಲ್ಲಿನ ದೇವಾಲಯದ ಆಸ್ಥಿಯನ್ನು ಸರ್ವೇನಂಬರ್ 80/3ಬಿ, 80/3ಎ2, 99/2ಬಿ, 102ಗಳಲ್ಲಿ ಖಾಸಗಿಯವರು ನಿರ್ಮಿಸಿರುವ ಅಕ್ರಮ ಕಟ್ಟಡವನ್ನು ದೇವಾಲಯದ ವಶಕ್ಕೆ ಮರಳಿ ಪಡೆಯಲು ಮಾನ್ಯ ಜಿಲ್ಲಾಧಿಕಾರಿಗಳವರಲ್ಲಿ ಹಾಗೂ ದೇವಾಲಯದ ವ್ಯವಸ್ಥಾಪನಾ ಸಮಿತಿ ಸಭೆಯ ಸೂಕ್ತ ಗಮನಕ್ಕೆ ತಂದು ಕಾನೂನು ಕ್ರಮ ಕೈಗೋಳ್ಳಲು ಕೋರ್ಟ್ ಮೊರೆಹೋಗಿದ್ದು.













27. ನಿರಂಜನಧಾಮ ವಸತಿಗೃಹ ನವೀಕರಣ :– ದೇವಾಲಯಕ್ಕೆ ಭರುವ ಭಕ್ತರಿಗೆ ಸೂಕ್ತ ಸುಸಜ್ಜಿತ ಕೊಠಡಿನ್ನು ನೀಡುವ ಸಲುವಾಗಿ ಹಾಲಿ 36 ಕೊಠಡಿಗಳನ್ನೊಳಗೊಂಡ ನಿರಂಜನಧಾಮ ವಸತಿ ಸಂಕೀರ್ಣದ ನವೀಕರಣಕ್ಕೆ ರೂ. 18 ಲಕ್ಷ ಗಳನ್ನು ಬಿಡುಗಡೆ ಮಾಡಿ ಕ್ರಮಕೈಗೊಳ್ಳಲಾಯಿತು.













28. ಶಾಲಾ ಬಸ್ ಖರೀದಿ :- ದೇವಾಲಯದ ಆಡಳಿತಕ್ಕೆ ಒಳಪಟ್ಟ ಶಾಲಾ-ಕಾಲೇಜು ಮಕ್ಕಳು ಹಳ್ಳಿ ಪ್ರದೇಶಗಳಿಂದ ವಿಧ್ಯಾಭ್ಯಾಸಕ್ಕೆ ಬರುವುದನ್ನು ಅವರಿಗೆ ಸೂಕ್ತ ವಾಹನದ ವ್ಯವಸ್ಥೆ ಇಲ್ಲದಿರುವುದನ್ನು ಗಮನಿಸಿ ಭಕ್ತರ ನೆರವಿನಿಂದ ದೇವಾಲಯಕ್ಕೆ ರೂ. 290000 ಗಳನ್ನು ದೇಣಿಗೆ ಪಡೆದು ಸದರಿ ಮೊತ್ತದಲ್ಲಿ ಕೆಎಸ್‌ಆರ್‌ಟಿಸಿಯ ಹಳೆಯ ಬಸನ್ನು ಖರೀದಿಸಿ ಕ್ರಮಕೈಗೊಳ್ಳಲಾಯಿತು.






29. ಶಾಲಾ ಶೌಚಾಲಯ ಕಟ್ಟಡ :– ದೇವಾಲಯದ ಆಡಳಿತಕ್ಕೆ ಒಳಪಟ್ಟ ಶಾಲಾ–ಕಾಲೇಜು ಮಕ್ಕಳಿಗೆ ಅತ್ಯವಾಶ್ಯಕವಾಗಿ ಬೇಕಾಗಿದ್ದ 2 ನಂ. ಪುರುಷ ಮತ್ತು ಮಹಿಳೆಯರ ಪ್ರತ್ಯೇಕ ಶೌಚಾಲಯ ಕಟ್ಟಡಗಳನ್ನು ರೂ. 9 ಲಕ್ಷಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಯಿತು.







30. ಕುಡಿಯುವ ನೀರಿನ ಸ್ಟ್ಯಾಂಡ್‌ಗಳು :- ಸ್ವಾಮಿಯ ದರ್ಶನಕ್ಕೆ ಸರತಿ ಸಾಲಿನಲ್ಲಿ ಬರುವ ಭಕ್ತರಿಗೆ ಹಾಗೂ ದೇವಾಲಯದ ಒಳಭಾಗ ಕುಡಿಯುವ ನೀರಿನ ವ್ಯವಸ್ಥೆಗಾಗಿ ಒಟ್ಟು 12 ನಂ. ನೀರಿನ ಸ್ಟೀಲ್ ಸ್ಟ್ಯಾಂಡ್‌ಗಳು ಹಾಗೂ ಅವಕ್ಕೆ ಅವಶ್ಯಕವಾದ ನೀರಿನ ಕ್ಯಾನ್ ಮತ್ತು ಟ್ಯಾಪ್‌ಗಳನ್ನು ಅಳವಡಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದು.





31. ಕಾಯಿ ಶೆಡ್ ನಿರ್ಮಾಣ :- ತಪೋಕ್ಷೇತ್ರ ಕಗ್ಗೆರೆ ಹಾಗೂ ಎಡೆಯೂರಿನ ದೇವಾಲಯಗಳಿಗೆ ಸಂಬಂಧಿಸಿದ ತೆಂಗಿನ ಮರಗಳಿಂದ ಬರುವ ತೆಂಗಿನ ಕಾಯಿಗಳನ್ನು ಹಾಕಲು ಅತ್ಯವಶ್ಯಕವಾಗಿ ಬೇಕಾಗಿದ್ದ ಸುಸಜ್ಜಿತ ಕಾಯಿ ಶೆಡ್ ನಿರ್ಮಾಣ ಮಾಡಿದ್ದು.







32. ಕಾಣಿಕೆ ಕೌಂಟರ್ ನಿರ್ಮಾಣ :– ದೇವಾಲಯದ ಆದಾಯ ಹೆಚ್ಚಿಸುವ ಸಲುವಾಗಿ ದೇವಾಲಯದ ಒಳಭಾಗ ಕಾಣಿಕೆ ಕೌಂಟರನ್ನು ನಿರ್ಮಿಸಿದ್ದು ಸದರಿ ಕೌಂಟರ್ ಪ್ರತಿ ನಿತ್ಯ ಕನಿಷ್ಠ ರೂ. 5000 ಗಳು ದೇಣಿಗೆ ದೇವಾಲಯಕ್ಕೆ ಸಂಗ್ರಹವಾಗಲು ಸಹಕಾರಿಯಾಗಿದೆ.



